# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ./ಎಸ್.ಟಿ. ನಂ. 40/2024**

ಪ್ರ.ವ.ಬೋ. ದಿನಾಂಕ – 11.06.2026

| | | | |
|---|---|---|---|
| ಸಾಕ್ಷಿದಾರರ ಹೆಸರು | – ಸಿದ್ದೇಶ | ಫ್ರಾ.ಸಾ. | – 04 |
| ತಂದೆಯ ಹೆಸರು | – ಮಲ್ಲಿಕಾರ್ಜುನ | ಚಾ.ಸಾ. | – 05 |
| ವಯಸ್ಸು | – 21 ವರ್ಷ | | |
| ಉದ್ಯೋಗ | – ಇಲೆಕ್ಟ್ರೀಷಿಯನ್ | | |
| ವಾಸ ಸ್ಥಳ | – ಬಾಲೇನಹಳ್ಳಿ, ಹಿರಿಯೂರು ತಾಲ್ಲೂಕು | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಚಾಸಾ–1 ನನ್ನ ದೊಡ್ಡಪ್ಪ ಮತ್ತು ಚಾಸಾ–2 ನನ್ನ ದೊಡ್ಡಮ್ಮ. ಚಾಸಾ:3, 4 ಗೊತ್ತು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನಗೆ ಗೊತ್ತು. ಆರೋಪಿ ಮತ್ತು ಚಾಸಾ–1, 2 ಇವರ ನಡುವೆಯಾದ ಗಲಾಟೆಯನ್ನು ನಾನು ನೋಡಿಲ್ಲ, ಬಿಡಿಸಿಲ್ಲ. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು.)

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ದಿಃ 06.10.2024 ರಂದು ನಾನು ಜಮೀನಿಗೆ ಹೋಗಿ ಕೆಲಸ ಮುಗಿಸಿಕೊಂಡು ಸಂಜೆ 5.45 ರ ಸಮಯದಲ್ಲಿ ನಾನು ನಮ್ಮ ಊರಿಗೆ ವಾಪಸ್ ಬೈಕಿನಲ್ಲಿ ಬರುತ್ತಿದ್ದಾಗ, ಚಾಸಾ:1 ರವರು ಬರುತ್ತಿದ್ದು, ಅವರನ್ನು ಬೈಕಿನಲ್ಲಿ ಕೂರಿಸಿಕೊಂಡು ಹೇಮದಳ ಚಳ್ಳಕೆರೆ ರಸ್ತೆಯಲ್ಲಿ ಇಳಿಸಿ ಮುಂದೆ ಹೋಗಿದ್ದು, ಚಾಸಾ:1 ಇವರು ಮನೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾಗ, ಆರೋಪಿಯು ಚಾಸಾ:1 ರವರಿಗೆ ತಡೆದು ನಮ್ಮ ಜಮೀನಿನಲ್ಲಿ

ಶೇಂಗಾ ಕಿತ್ತಿದ್ದೀಯಾ ಎಂದು ಗಲಾಟೆ ಮಾಡಿ ಜಾತಿ ನಿಂದನೆ ಮಾಡಿ ಬಲದವಡೆಗೆ ಗುದ್ದಿ ಮತ್ತು ಎಡಗೈ ಹೆಬ್ಬೆರಳಿಗೆ, ಬಲ ತೋರುಬೆರಳಿಗೆ ಬಾಯಿಂದ ಕಚ್ಚಿ ಗಾಯ ಮಾಡಿದ್ದು, ಆಗ ಅಲ್ಲಿಯೇ ಇದ್ದ ನಮ್ಮೂರಿನ ರಂಗಸ್ವಾಮಿ ಮತ್ತು ನಾನು ಗಲಾಟೆ ಬಿಡಿಸಿದ್ದು, ಆಗ ಚಾಸಾ–2 ಜಗಳ ಬಿಡಿಸಲು ಹೋದಾಗ ಆರೋಪಿಯು ಚಾಸಾ–2 ರವರನ್ನು ದಬ್ಬಿ ಹೋಗಿದ್ದು, ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ–11 ಎಂದು ಗುರುತಿಸಲಾಯಿತು. ನಿಪಿ–11 ರಂತೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪತರ ಪರವಾಗಿ ಶ್ರೀಮತಿ ಎಂ.ಬಿ. ವಕೀಲರಿಂದ –**

**ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.